ಮುಂದುವರಿಸಿದ, 'ನಮ್ಮ ಸೀತಾಪುರದ ಪರಿವರ್ತನೆಗಾಗಿ ನಾವು ಮೂರು ದಿಕ್ಕಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ಮೂರೂ ದಿಕ್ಕಿನ ಕೆಲಸ ಒಟ್ಟೊಟ್ಟಿಗೇ ಸಾಗಬೇಕು. ಹಾಗಾದಲ್ಲಿ ಯಶಸ್ಸು ಗ್ಯಾರಂಟಿ.'

ಮೊದಲನೇದಾಗಿ ಸೀತಾಪುರ ಹೊರ ಪ್ರಪಂಚದ ಜೊತೆ ಡಿಜಿಟಲ್ ಸಂಪರ್ಕದಲ್ಲಿ ಇರಬೇಕು. ಇದಕ್ಕೆ ನಮ್ಮೂರಿಗೆ 'ಇಂಟರ್ನೆಟ್' ಬರಬೇಕು. ಪ್ರತೀ ಮನೆಯು ಇಂಟರ್ನೆಟ್ ಮೂಲಕ ಹೊರ ಪ್ರಪಂಚದ ಸಂಪರ್ಕದಲ್ಲಿ ಇರಬೇಕು. ಅಲ್ಲಿ ಏನು ಆಗುತ್ತದೆ ಅಂತ ಗೊತ್ತಿರಬೇಕು.

'ಅದಕ್ಕೆ ಏನು ಮಾಡಬೇಕು ಕಾರಂತರೇ' ಶೆಟ್ಟರು ಪ್ರಶ್ನಿಸಿದರು.

ಸಂಜಯ್ 'ಶೆಟ್ರೇ, ಇದಕ್ಕೆ ನಿಮ್ಮ ಸಹಾಯ ಬೇಕು. ನಾವು ಯಾವುದಾದರೂ ಮೊಬೈಲ್ ಕಂಪನಿಯ ಹತ್ತಿರ ಮಾತನಾಡಿ ನಮ್ಮ ಗುಡ್ಡೆಯ ಮೇಲೆ ಒಂದು ಟವರ್ ಹಾಕಬೇಕು. ಹಾಗೆ ಹಾಕಿಸಿದರೆ ಅದರ ನಂತರ ಇಡೀ ಊರಿಗೇ ಸಿಗ್ನಲ್ ಸಿಗುತ್ತದೆ' ಅಂದ.

ಶೆಟ್ಟರು 'ನಾನು ಹಿಂದೊಮ್ಮೆ ಮಂಗಳೂರಿಗೆ ಹೋದಾಗ ನ್ಯೂಟೆಲ್ ಮತ್ತು ನಿಯೋ ಕಂಪೆನಿಗಳ ಜೊತೆ ಮಾತಾಡಿದ್ದೆ. ಅವರಿಗೆ ಇಲ್ಲಿ ಎಷ್ಟು ಗಿರಾಕಿ ಸಿಗುತ್ತಾರೆ ಎಂಬುದೇ ಪ್ರಶ್ನೆ. ಹಾಗಾಗಿ ಅವರು ಮನಸ್ಸು ಮಾಡಿಲ್ಲ' ಅಂದರು.

ಸಂಜಯ್ 'ಬಹಳ ಸಂತೋಷ ಶೆಟ್ರೇ, ನಿಮಗೆ ಪರಿಚಯ ಉಂಟು ಅಂತ ಆಯ್ತು. ನಿಮ್ಮ ಜೊತೆ ನಾನೂ ಬರ್ತೇನೆ, ಆಗ ಅದು ಸುಲಭ ಆಗ್ತದೆ' ಅಂದ.

'ನಮ್ಮ ಎರಡನೇ ಕೆಲಸ ಅಂದ್ರೆ ಸೀತಾಪುರದ ಜನರನ್ನು ಡಿಜಿಟಲ್ ಅಕ್ಷರಸ್ಥರನ್ನಾಗಿ ಮಾಡುವುದು. ಇದಕ್ಕೆ ನಾವು ಪ್ರತೀ ಮನೆಗೆ ಒಂದು ಸ್ಮಾರ್ಟ್‌ಫೋನ್ ಕೊಡಬೇಕು. ಹಾಗೇ ಮನೆಗೊಂದು ಇಂಟರ್ನೆಟ್ ಕನೆಕ್ಷನ್ ಕೊಡಬೇಕು. ನನ್ನಲ್ಲಿ ಸುಮಾರು ಐವತ್ತು ಸ್ಮಾರ್ಟ್‌ಫೋನ್ ಕೊಡುವ ಬಜೆಟ್ ಇದೆ. ಹಾಗೇ ಒಂದು ವರ್ಷದ ಇಂಟರ್ನೆಟ್ ಕನೆಕ್ಷನ್ ಕೂಡ ಉಚಿತವಾಗಿ ಕೊಡುತ್ತೇನೆ. ನಾವು ಮಂಗಳೂರಿಗೆ ಹೋದಾಗ ಆ ಸ್ಮಾರ್ಟ್ ಫೋನನ್ನು ಅಲ್ಲಿ ಖರೀದಿಸಬಹುದು. ಅಲ್ಲೇ ಮೊಬೈಲ್ ಕಂಪನಿಯವರಿಗೆ ಐವತ್ತು ಕನೆಕ್ಷನ್‌ನ ಗ್ಯಾರೆಂಟಿ ಕೊಡಬಹುದು' ಅಂದ.

ಆನಂದಣ್ಣನಿಗೆ ಸಂತೋಷವೇ ಸಂತೋಷ. ಅಲ್ಲಿಂದಲೇ ಎದ್ದು ನಿಂತು 'ಕಾರಂತರೇ, ನನಗೆ ನನ್ನ ಕಿವಿ ನಂಬಲಿಕ್ಕೇ ಆಗ್ತಾ ಇಲ್ಲ. ನಿಮ್ಮನ್ನು ಆ ದೇವರೇ ಕಳುಹಿಸಿದ್ದು. ಇಲ್ಲದಿದ್ದರೆ ಇಷ್ಟು ಜನರಿಗೆ ಉಚಿತವಾಗಿ ಯಾರಿಗೆ ಸೆಲ್ ಫೋನ್ ಕೊಡ್ಲಿಕ್ಕೆ ಆಗ್ತದೆ ಹೇಳಿ' ಅಂದರು.

ಅದಕ್ಕೆ ಸಂಜಯ್ 'ಆನಂದಣ್ಣ, ಆದರೆ ಇದರಲ್ಲೂ ಒಂದು ಸಮಸ್ಯೆ ಇದೆ. ನಮಗೆ ಜನ ಸೆಲ್ ಫೋನ್ ಮನೆಗೆ ಕೊಂಡುಹೋಗಿ ಕಪಾಟಿನಲ್ಲಿ ಇಡುವವರು ಬೇಡ. ನಮಗೆ ಅದನ್ನು ದಿನವೂ ಉಪಯೋಗಿಸಿ ಅದರಲ್ಲಿ ಬಿಸಿನೆಸ್ ಮಾಡುವ ಜನ ಬೇಕು' ಅಂದ.

'ಜನ ಸಿಕ್ತಾರೆ, ಆದರೆ ಅವರಿಗೆ ಯಾರು ಹೇಳಿಕೊಡುವುದು' ಅಂತ ಆನಂದಣ್ಣ ಕೇಳಿದರು.

ಸಂಜಯ್ 'ನಾನಿದ್ದೇನಲ್ಲ? ನಾನು ಈ ವಿಷಯದಲ್ಲಿ ಎಕ್ಸ್‌ಪರ್ಟ್. ಆದರೆ ಅಷ್ಟು ಬೇಗ ಐವತ್ತು ಜನರನ್ನು ಹೇಗೆ ಗುರುತಿಸುವುದು?' ಅಂದ.

ಶೆಟ್ಟರು ಒಂದು ಕ್ಷಣ ಆಲೋಚಿಸಿ, 'ಕಾರಂತರೇ, ನನ್ನಲ್ಲೊಂದು ಐಡಿಯಾ ಇದೆ. ಇವತ್ತು ರಾತ್ರೆ ನಮ್ಮ ದೇವಸ್ಥಾನದಲ್ಲಿ ವಸಂತಪೂಜೆ. ನೂರಾರು ಜನ ಅಲ್ಲಿ ಸೇರುತ್ತಾರೆ. ಅಲ್ಲಿ ಈ ಬಗ್ಗೆ ಅವರಿಗೆ ಹೇಳಿ. ಯಾರು ಮನಸ್ಸು ಮಾಡ್ತಾರೋ ಅವರನ್ನು ನಾವು ಈ ಯೋಜನೆಯಲ್ಲಿ ಸೇರಿಸಬಹುದು' ಅಂದರು.

ಆನಂದಣ್ಣನಿಗೆ ಬಹಳ ಖುಷಿ ಆಯ್ತು. 'ಶೆಟ್ರೇ, ಸರಿಯಾಗಿ ಹೇಳಿದ್ರಿ. ಇವತ್ತೇ ರಾತ್ರಿ ಶುರು ಮಾಡುವ. ಅದರಲ್ಲೂ ದೇವಸ್ಥಾನದ ಪೂಜೆಯ ಜೊತೆ ಶುರು ಮಾಡುವುದು ಮತ್ತಷ್ಟು ಒಳ್ಳೆಯದು' ಎನ್ನುತ್ತಾ, 'ಕಾರಂತರೇ, ನನಗೆ ಇಡೀ ಊರಲ್ಲಿ ಯಾರು ಏನು ಎಂದು ಗೊತ್ತು. ನಾನು ಜನರನ್ನು ಸೆಲೆಕ್ಟ್ ಮಾಡ್ತೇನೆ. ಆ ವಿಚಾರ ನನಗೆ ಬಿಡಿ' ಎಂದು ಹೇಳಿದರು.

ಸಂಜಯ್ 'ಬಹಳ ಸಂತೋಷ' ಅಂದ. ಮತ್ತೆ ಮುಂದುವರಿಸಿದ.

'ನಾನು ಮೂರನೇ ಕೆಲಸ ಹೇಳ್ತೇನೆ ಕೇಳಿ. ನಮ್ಮ ಸೀತಾಪುರ ಹೊರ ಜಗತ್ತಿನ ಜೊತೆ ವ್ಯಾವಹಾರಿಕ ಸಂಪರ್ಕ ಹೊಂದಬೇಕು. ಅದಕ್ಕೆ ರಸ್ತೆ ಮತ್ತೆ ಬೇರೆ ಮೂಲಭೂತ ಸೌಲಭ್ಯ ಬೇಕು' ಅಂದ.

ಶೆಟ್ಟರ ಮುಖ ಸ್ವಲ್ಪ ಕಳೆಗುಂದಿತು. 'ನೀವು ಎರಡು ತಿಂಗಳು ಹೇಳ್ತೀರಿ, ರಸ್ತೆ ಹೇಗೆ ಮಾಡುವುದು?' ಅಂದರು.

ಸಂಜಯ್ 'ಶೆಟ್ರೇ, ನಾನು ದೊಡ್ಡ ರಸ್ತೆ ಹೇಳ್ತಿಲ್ಲ. ಹಾಗೆ ದೊಡ್ಡ ರಸ್ತೆ ಅಗತ್ಯಾನೂ ಇಲ್ಲ. ನಮಗೆ ಸವಣೂರಿನಿಂದ ಸೀತಾಪುರಕ್ಕೆ ಬರ್ಲಿಕ್ಕೆ ಸರಿಯಾದ ಕಾಲುದಾರಿ ಬೇಕು. ಹೊರಪ್ರಪಂಚಕ್ಕೆ ಇದೊಂದು ದೊಡ್ಡ ಟ್ರೆಕ್ಕಿಂಗು (ಚಾರಣ) ಸ್ಥಳ. ನಾನು ಹಿಂದೆಯೇ ಹೇಳಿದ ಹಾಗೆ ಬಂದವರಿಗೆ ಇರ್ಲಿಕ್ಕೆ ಎರಡು ಕುಟೀರ ಮಾಡೋಣ. ಒಂದು ನಿಮ್ಮ ಜಾಗದಲ್ಲಿ, ಮತ್ತೊಂದು ಆನಂದಣ್ಣನ ಜಾಗದಲ್ಲಿ' ಅಂದ.

ಶೆಟ್ಟರು ಸ್ವಲ್ಪ ಆಲೋಚಿಸಿದರು. ಆಗ ಆನಂದಣ್ಣ ಶೆಟ್ಟರ ಸಹಾಯಕ್ಕೆ ಬಂದರು.

'ಶೆಟ್ರೇ, ನಾವು ಈ ವಿಷಯ ಇವತ್ತು ದೇವಸ್ಥಾನದಲ್ಲಿ ಹೇಳ್ತೇವೆ ಅಲ್ವಾ? ಹಾಗೇ ಕಾಲುದಾರಿ ಮಾಡ್ಲಿಕ್ಕೆ ಶ್ರಮದಾನ ಮಾಡುವ ವಿಷಯ ಹೇಳುವ. ನಮ್ಮೂರಲ್ಲಿ ಹುಡುಗರು ಕಡಿಮೆಯೇ? ಅದರ ಮೇಲೆ ನಾವು ಫ್ರೀಯಾಗಿ ಸೆಲ್ ಫೋನ್ ಬೇರೆ ಕೊಡ್ತೇವೆ. ನೀವು ಏನೂ ಹೆದರಬೇಡಿ. ನೋಡುತ್ತಾ ಇದ್ದ ಹಾಗೆ ರಸ್ತೆಯೂ ಕುಟೀರವೂ ಆಗ್ತದೆ ನೋಡಿ' ಅಂದರು.

ಶೆಟ್ಟರಿಗೆ ಇದು ಸರಿ ಕಂಡಿತು. ತಲೆಯಾಡಿಸಿದರು.

ನಂತರ ಸಂಜಯ್ ಮುಂದುವರೆಸಿ, 'ನಾನು ನಿಮಗೆ ಬಹಳ ಮುಖ್ಯ ವಿಷಯ ಹೇಳಲಿಲ್ಲ. ನನಗೆ ಈ ಎಲ್ಲಾ ಕೆಲಸ ನಾಲ್ಕೈದು ವಾರದಲ್ಲಿ ಆಗಬೇಕು. ಇಲ್ಲದಿದ್ದರೆ ನನಗೆ ಹಣ ಕೊಡುವವರು ಹಿಂದೇಟು ಹಾಕುತ್ತಾರೆ. ಇದೆಲ್ಲ ಆಗ್ಬಹುದಾ?' ಕೇಳಿದ.

ಶೆಟ್ಟರೂ ಆನಂದಣ್ಣನೂ ಸ್ವಲ್ಪ ಸಮಯ ಆಲೋಚಿಸಿ, 'ಕಾರಂತರೇ, ನಿಮ್ಮ ಮಾರ್ಗದರ್ಶನ ಇದ್ದರೆ ನಾವು ಮಾಡುತ್ತೇವೆ' ಅಂದರು.

ಸಂಜಯನಿಗೆ ಬಹಳ ಸಂತೋಷ ಆಯಿತು.

'ನೋಡಿ, ಇದೆಲ್ಲಾ ಮಾಡುವಾಗ ನಾನು ಒಂದು ಬಹಳ ಮುಖ್ಯ ಕೆಲಸ ಮಾಡಬೇಕು. ಇಡೀ ಜಗತ್ತಿಗೇ ಸೀತಾಪುರದಲ್ಲಿ ಆಗುವ ಪರಿವರ್ತನೆಯನ್ನು ನಾನು ಇಂಟರ್ನೆಟ್ ಮತ್ತು ಸೋಶಿಯಲ್ ಮೀಡಿಯಾ ಮುಖಾಂತರ ತಿಳಿಸಿ ಅಲ್ಲಿ ಬಿಸಿನೆಸ್ ಸೃಷ್ಟಿ ಮಾಡಬೇಕು. ಇದು ಎಲ್ಲಕ್ಕಿಂತ ಬಹಳ ಕಷ್ಟದ ಕೆಲಸ' ಅಂದ.

ಅದಕ್ಕೆ ಶೆಟ್ರು 'ಕಾರಂತರೇ, ನಾವು ಅನಕ್ಷರಸ್ಥರು. ನಿಮಗೆ ಏನೂ ಸಹಾಯ ಮಾಡುವ ಯೋಗ್ಯತೆ ನಮ್ಮಲ್ಲಿಲ್ಲ. ಆದರೆ ನಿಮಗೆ ಬೇಕಾದಾಗ ಕಾಫಿ, ಚಹಾ, ಎಳನೀರು ಇತ್ಯಾದಿ ಏನು ಬೇಕಾದರೂ ಕೊಡಬಹುದು ಅಷ್ಟೇ' ಅಂದರು ನಗುತ್ತಾ.

ಸಂಜಯ್ 'ಶೆಟ್ರೇ, ಇದು ನನಗೆ ಹೊಸತಲ್ಲ... ನಾನು ಮಾಡ್ತೇನೆ ಬಿಡಿ. ನನಗೆ ಒಬ್ಬ ಹುಡುಗ ಕ್ಯಾಮೆರಾಮನ್ ಆಗಿ ಸಹಾಯಕ್ಕೆ ಬೇಕು... ಯಾರಾದರೂ ಸಿಕ್ಕಬಹುದಾ?' ಕೇಳಿದ.

ಶೆಟ್ಟರು ಆಗಲೇ ತಮ್ಮ ಅಳಿಯನನ್ನು ಜೋರಾಗಿ ಕೂಗಿ 'ನೋಡಿ, ಇವ ನನ್ನ ಅಳಿಯ. ಸೆಕೆಂಡ್ ಪಿ.ಯು.ಸಿ.ಯಲ್ಲಿ ಫೇಲ್ ಆಗಿ ಏನೂ ಕೆಲಸ ಇಲ್ಲದೆ ಇಲ್ಲಿ ತಿರುಗಾಡುತ್ತಿದ್ದಾನೆ. ಇವನಿಗೆ ಎಲ್ಲಾ ವಸ್ತುಗಳನ್ನು ಬಿಚ್ಚಿ ಅದನ್ನು ರಿಪೇರಿ ಮಾಡುವ ಹುಚ್ಚು. ಮನೆಯಲ್ಲಿ ಇದ್ದ ವಸ್ತುಗಳನ್ನು ಬಿಚ್ಚಿ ಹಾಳು ಮಾಡ್ತಾ ಇದ್ದಾನೆ. ನಿಮ್ಮ ಜೊತೆ ತಿರುಗಿದರೆ ಸ್ವಲ್ಪ ಕೆಲಸ ಕಲಿತುಕೊಳ್ಳಬಹುದು. ಏ, ಏನೋ ಇವನೇ, ಕಾರಂತರ ಜೊತೆ ಹೋಗ್ತಿಯಾ?' ಎನ್ನುತ್ತಾ ಹುಡುಗನ ತಲೆಗೊಂದು ಹೊಡೆದರು.

ಹುಡುಗ ಹೆದರಿ 'ಹ್ಞೂಂ' ಅಂದ. ಈ ಹಿಂದೆ ಅವನೇ ಸಂಜಯನ ಹಿಂದೆ ಬಿದ್ದು ಆಶಾಳಿಂದ ಬೈಗಳು ತಿಂದಿದ್ದ.

ಸಂಜಯ್ 'ಶೆಟ್ರೇ, ಹಾಗಾದರೆ ನಮ್ಮ ಪ್ಲಾನ್ ರೆಡಿ ಆಗಿದೆ. ನಾನು ಅಮೆರಿಕದಲ್ಲಿ ಇರುವ ನನ್ನ ಕಂಪನಿಗೆ ತಿಳಿಸ್ತೇನೆ. ಸರಿ ತಾನೇ?' ಅಂದ.

'ಖಂಡಿತ' ಅಂದರು ಇಬ್ಬರೂ ಜೊತೆಗೆ.

'ಇವತ್ತು ರಾತ್ರೆ ದೇವಸ್ಥಾನದಲ್ಲಿ ಸಿಗೋಣ' ಅಂದ ಸಂಜಯ್.

ಆನಂದಣ್ಣ 'ನಾನೇ ಶಾಸ್ತ್ರಿಗಳ ಮನೆಗೆ ಬಂದು ನಿಮ್ಮನ್ನು ಕರ್ಕೊಂಡು ಹೋಗ್ತೇನೆ' ಅಂದರು.

ಸಂಜಯ್ ಶಾಸ್ತ್ರಿಗಳ ಮನೆಗೆ ಹಿಂತಿರುಗಿದ.

ಮಧ್ಯಾಹ್ನ ಊಟ ಮುಗಿಸಿ ಸಂಜಯ್ ತನ್ನ ಕಂಪ್ಯೂಟರ್ ಎದುರು ಕುಳಿತ. ತಾನು ಪೇಪರ್‌ನಲ್ಲಿ ಬರೆದುಕೊಂಡದ್ದನ್ನು ಕಂಪ್ಯೂಟರ್‌ಗೆ ಇಳಿಸಿದ. ಹಾಗೇ ತನ್ನ ಮುಂದಿನ ಎರಡು ತಿಂಗಳ ಕಾರ್ಯಕ್ರಮ, ಪ್ರತಿದಿನ ಏನು ಮಾಡಬೇಕು, ಯಾರಲ್ಲಿ ಮಾತಾಡಬೇಕು ಎಂಬುದನ್ನು ತಯಾರಿಸಿದ. ಸಂಜೆಯಾಗುತ್ತಿದ್ದಂತೆ ಎಂದಿಗಿಂತಲೂ ಮೊದಲು ಗುಡ್ಡಕ್ಕೆ ಹೋಗಲು ಹೊರಟುನಿಂತ.

ಆಶಾ 'ಇವತ್ತೇನು ಕಾರಂತರು ಬೇಗನೇ ಹೊರಟಿದ್ದೀರಿ?' ಕೇಳಿದಳು.

'ಆಶಾ, ನನಗೆ ಬಹಳ ಕೆಲಸ ಉಂಟು,